ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ. ವೆಂಕಟೇಶ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1002
ಉತ್ತರಿಸಬೇಕಾದ ದಿನಾಂಕ : 29.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2019ನೇ ಸಾಲಿನಲ್ಲಿ ಮೈಮುಲ್‌ನಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಮೈಸೂರು ಇದರ ವೃಂದ ಬಲದಲ್ಲಿ ಖಾಲಿ ಇರುವ 168 ವಿವಿಧ ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:07.09.2019 ರಂದು ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9123/2020 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಲ್ಲಿಕೆಯಾಗಿರುವುದರಿಂದ ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿದ್ದು, ಅದರಂತೆ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.
ಆ)	ಬಂದಿದ್ದಲ್ಲಿ, ಯಾವ ಯಾವ ಹುದ್ದೆಗಳ ನೇಮಕಾತಿ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ಅಧಿಸೂಚನೆಯಲ್ಲಿ ನಿಗಧಿಪಡಿಸಲಾದ ಅರ್ಹತೆಗಳನುಸಾರ ನೇಮಕಾತಿ ನಡೆದಿದೆಯೇ (ನೇಮಕಾತಿಗೊಂಡವರ ವಿವರ ನೀಡುವುದು)	ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ., ಮೈಸೂರು ಇದರ ವೃಂದ ಬಲದಲ್ಲಿ ಖಾಲಿ ಇರುವ ಈ ಕೆಳಕಾಣಿಸಿದ ಹುದ್ದೆಗಳ ನೇಮಕಾತಿಗಾಗಿ ದಿ:07.09.2019 ರಂದು ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ.

ಕ್ರ ಸಂ	ಹುದ್ದೆಯ ಹೆಸರು	ಒಟ್ಟು ಹುದ್ದೆಗಳು
1	ಸಹಾಯಕ ವ್ಯವಸ್ಥಾಪಕರು (ಎ.ಹೆಚ್.& ಎ.ಐ)	12
2	ಸಹಾಯಕ ವ್ಯವಸ್ಥಾಪಕರು (ಎಫ್&ಎಫ್)	02
3	ತಾಂತ್ರಿಕ ಅಧಿಕಾರಿ (ಡಿ.ಟಿ)	05
4	ಖರೀದಿ/ಉಗ್ರಾಣಾಧಿಕಾರಿ	01
5	ಆಡಳಿತಾಧಿಕಾರಿ	01
6	ಲೆಕ್ಕಾಧಿಕಾರಿ	01
7	ಎಂಐಎಸ್ / ಸಿಸ್ಟಂ ಆಫೀಸರ್	01
8	ತಾಂತ್ರಿಕಅಧಿಕಾರಿ (ಗು.ನಿ)	02
9	ಮಾರುಕಟ್ಟೆ ಅಧಿಕಾರಿ	02
10	ಭದ್ರತಾ ಅಧಿಕಾರಿ	01
11	ತಾಂತ್ರಿಕಾಧಿಕಾರಿ (ಇಂಜಿನಿಯರಿಂಗ್)	05
12	ಡೈರಿ ಸೂಪರ್‌ವೈಸರ್ ದರ್ಜೆ–2	04
13	ವಿಸ್ತರಣಾಧಿಕಾರಿ ದರ್ಜೆ–3	15
14	ಕೆಮಿಸ್ಟ್ ದರ್ಜೆ–2	12
15	ಲೆಕ್ಕ ಸಹಾಯಕ ದರ್ಜೆ–2	04
16	ಅಡ್ಮಿನ್ ಅಸಿಸ್ಟೆಂಟ್ ದರ್ಜೆ–2	18
17	ಭದ್ರತಾ ಸಹಾಯಕರು	08
18	ಮಾರುಕಟ್ಟೆ ಸಹಾಯಕ ದರ್ಜೆ–2	18
19	ಜೂನಿಯರ್ ಸಿಸ್ಟಂ ಅಪರೇಟರ್	07
20	ಜೂನಿಯರ್‌ಟೆಕ್ನಿಷಿಯನ್ /ಬಾಯ್ಲರ್‌ಅಟೆಂಡೆಂಟ್	49

ಈ ಮೂಲ ನೇಮಕಾತಿ ಪ್ರಕಟಣೆಯೊಂದಿಗೆ ಹೆಚ್ಚುವರಿ ಈ ಕೆಳಕಂಡ 25 ಹುದ್ದೆಗಳ ನೇಮಕಾತಿಗೂ ಕ್ರಮ ಅನುಸರಿಸಲಾಗಿದೆ.

ಕ್ರ. ಸಂ	ಹುದ್ದೆಯ ಹೆಸರು	ಒಟ್ಟು ಹುದ್ದೆಗಳು
1	ವಿಸ್ತರಣಾಧಿಕಾರಿ ದರ್ಜೆ–3	12
2	ಕೆಮಿಸ್ಟ್ ದರ್ಜೆ–2	02
3	ಲೆಕ್ಕ ಸಹಾಯಕ ದರ್ಜೆ–2	02
4	ಅಡ್ಮಿನ್ ಅಸಿಸ್ಟೆಂಟ್ ದರ್ಜೆ–2	05
5	ಜೂನಿಯರ್‌ಟೆಕ್ನಿಷಿಯನ್ /ಬಾಯ್ಲರ್‌ಅಟೆಂಡೆಂಟ್	04

ಅಧಿಸೂಚನೆಯಲ್ಲಿ ನಿಗಧಿಪಡಿಸಲಾದ ಅರ್ಹತೆಗಳಿಗುನುಸಾರ ಮತ್ತು ಷರತ್ತು-ನಿಬಂಧನೆಗಳಂತೆ ಒಕ್ಕೂಟದ ನೇಮಕಾತಿ ಸಮಿತಿಯು ನೇಮಕಾತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ಸಂದರ್ಶನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುತ್ತದೆ. ಆದರೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9123/2020 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಲ್ಲಿಕೆಯಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶವು **"The final Selection list shall not be published without the leave of the court"** ಆಗಿರುತ್ತದೆ. ಮಾನ್ಯ ನ್ಯಾಯಾಲಯದ ಈ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಸಂಖ್ಯೆ: ಸಿಒ 85 ಸಿಸಿಬಿ 2020

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

991 (1002)